ಸಾವಿತ್ರಿ ಸ್ತಬ್ಧಳಾದಳು. ಮದುವೆ ದಿನದಿಂದ ಪ್ರಾರಂಭಿಸಿ ಮೊನ್ನೆ ಮೊನ್ನೆಯವರೆಗೆ ಅಂದರೆ ತಾನು ವಿಸ್ಮೃತಿಗೆ ಜಾರಿಕೊಳ್ಳುವ ಮೊದಲಿನವರೆಗೆ ಇದೇ ರೀತಿಯ ಮಾತುಗಳನ್ನು ಆಡಿ ಭಾವೂ ಅವಳೊಂದಿಗೆ ತಮಾಷೆಯಾಗಿ ನಡೆದುಕೊಳ್ಳುತ್ತಿದ್ದರು. ಅವಳನ್ನು ರೇಗಿಸುತ್ತಿದ್ದರು.

ತಾನು ಸತ್ಯವಾನ... ನೀನು ಸಾವಿತ್ರಿ...

ಎಷ್ಟೋ ದಿನಗಳ ಬಳಿಕ ಭಾವೂ ಬಾಯಿಯಿಂದ ಈ ವಾಕ್ಯವನ್ನು ಕೇಳಿಸಿಕೊಳ್ಳುತ್ತಿದ್ದಾಳೆ ಸಾವಿತ್ರಿ. ಹಿಂದೆ ಅವಳನ್ನು ರೇಗಿಸಲು ಹೇಳುತ್ತಿದ್ದ ಅದೇ ವಾಕ್ಯಗಳು ಇಂದು ಅವಳಿಗೇ ತಿಳಿಯದ ಹಾಗೆ ಅವಳಲ್ಲಿ ಚೈತನ್ಯವನ್ನು ಮೂಡಿಸಿದವು.

– ನಾನು ಯಾರು? ನಾನು ಸಾಮಾನ್ಯ ಹೆಣ್ಣಲ್ಲ. ನಾನು ಸಾವಿತ್ರಿ. ಪ್ರತ್ಯಕ್ಷ ಯಮನನ್ನೇ ಸೋಲಿಸಿ ತನ್ನ ಗಂಡನ ಪ್ರಾಣವನ್ನು ತಂದ ಪುರಾಣದ ಸಾವಿತ್ರಿಯ ವೇಷ ಧರಿಸಿದ ನಾನು ಕಲಿಯುಗದ ಸಾವಿತ್ರಿ. ನನಗೆ ಮದುವೆಯ ಸಮಯದಲ್ಲಿ 'ಸಾವಿತ್ರಿ' ಎಂದು ಹೆಸರಿಟ್ಟವರು ಭಾವೂ. ಅದರ ಹಿಂದೆ ಈ ಉದ್ದೇಶವೂ ಇರಬಹುದು. ನನ್ನ ಹೆಸರನ್ನು ಉಲ್ಲೇಖಿಸಿ ಭಾವೂ ನನಗೆ ತಮಾಷೆ ಮಾಡುತ್ತಿದ್ದುದು ನಿಜ. ಆದರೆ, ಈಗ ನಾನು ಆ ಸಾವಿತ್ರಿಯ ಹಾಗೆ ಧೈರ್ಯದಿಂದ ಕಾರ್ಯ ನಿರ್ವಹಿಸಬೇಕು ತಾನೇ. ಹೌದು, ನಾನು ಧೈರ್ಯದಿಂದ ಎದ್ದು ನಿಂತು ಕಾರ್ಯ ನಿರ್ವಹಿಸುತ್ತೇನೆ. ರೋಗಿ ಭಾವೂನನ್ನು ಏಕಾಂಗಿಯಾಗಿಯೆ ಸಂಭಾಳಿಸುವೆ. ಅವರ ವೈದ್ಯಕೀಯ ಉಪಚಾರಕ್ಕಾಗಿ ಗೋವೆಯಲ್ಲಿ ಮಾತ್ರವಲ್ಲ, ಅಗತ್ಯ ಬಿದ್ದರೆ ಗೋವೆಯ ಹೊರಗೆ ಕರೆದುಕೊಂಡು ಹೋಗುವುದಕ್ಕೂ ನಾನು ಸಿದ್ಧಳಿದ್ದೇನೆ. ದೀಪಕ ಮನೆ ಬಿಟ್ಟು ಹೋಗಲಿ. ಗೌರಿ ಅಪ್ಪ ಅಮ್ಮನಿಗೆ ಬೆನ್ನು ತೋರಿಸಲಿ. ಈ ಎಲೆ ಹಣ್ಣಾಗಿದೆ ನಿಜ, ಆದರೆ ಇದುವರೆಗೆ ಅದು ಒಣಗಿಲ್ಲ ಎಂಬುದನ್ನು ನಾನು ಜನರಿಗೆ ತೋರಿಸಬೇಕಾಗಿದೆ.

ಮುದುಡಿಕೊಂಡಿದ್ದ ಸಾವಿತ್ರಿಯ ಮನಸ್ಸು ಈಗ ನಿಧಾನವಾಗಿ ಅರಳಿತು. ಮೈಗೆ ಅಂಟಿಕೊಂಡಿದ್ದ ನಡುಕವೂ ಈಗ ಬಿಟ್ಟು ಹೋಯಿತು. ತನ್ನ ಮೈಯಲ್ಲಿ ಚೇತರಿಕೆ ತುಂಬಿಕೊಂಡಿರುವುದು ಅವಳ ಅರಿವಿಗೆ ಬಂತು. ಅವಳು ಭಾವೂ ಕಡೆಗೆ ದೃಷ್ಟಿ ಹರಿಸಿದಳು. ಈಗ ಅವರ ಬಡಬಡಿಕೆ ನಿಂತಿತ್ತು. ಆತ ಶಾಂತವಾಗಿ ನಿದ್ರಿಸುತ್ತಿದ್ದರು. ಸಾವಿತ್ರಿ ಮಂಚದಿಂದ ಕೆಳಗಿಳಿದು ಕಿಟಕಿಯ ಬಳಿ ಹೋದಳು. ತಾನು ಮುಚ್ಚಿದ್ದ ಕಿಟಕಿ ಬಾಗಿಲನ್ನು ಅವಳು ನಿಧಾನವಾಗಿ ತೆರೆದಳು. ತೆರೆದ ಕಿಟಕಿಯಿಂದ ತಣ್ಣನೆ ಗಾಳಿ ಒಳಗೆ ಪ್ರವೇಶಿಸಿತು.

ಹೊರಗೆ ಬೆಳಕಾಯಿತು. ಗಾಢ ಅಂಧಕಾರವನ್ನು ಓಡಿಸಿ ಬೆಳಕಿನ ಕೆಂಪು ಕಿರಣಗಳು ಭೂಮಿಗೆ ಇಳಿದು ಬಂದವು.


**ಜಯಂತಿ ನಾಯಕ್**



ಸಂಶೋಧಕಿ ಮತ್ತು ಜಾನಪದ ವಿದ್ವಾಂಸೆ. ಕಥಾಸಂಕಲನ, ನಾಟಕ, ಜಾನಪದ ಪರ್ವ ಹಾಗೂ ಭಾಷಾಂತರ ಕೃತಿಗಳನ್ನು ಪ್ರಕಟಿಸಿದ್ದಾರೆ. ಗೋವೆಯ ಕೊಂಕಣಿ ಅಕಾಡೆಮಿಯಲ್ಲಿ ಅಧಿಕಾರಿ. ಪ್ರಸ್ತುತ ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನನ್ಯ'ದ ಸಂಪಾದಕಿ. ಅವರ 'ಅಥಾಂಗ್' ಕಥಾಸಂಕಲನಕ್ಕೆ ಮತ್ತು 'ಜಿಂದಗಿನಾಮಾ' ಅನುವಾದ ಕೃತಿಗೆ ಕೇಂದ್ರ ಸಾಹಿತ್ಯ ಅಕಾದೆಮಿ ಪುರಸ್ಕಾರ ದೊರೆತಿದೆ.

**ಗೀತಾ ಶೆಣೈ**



ಕೊಂಕಣಿಯ ಅನೇಕ ಲೇಖಕರ, ಲೇಖಕಿಯರ ಕತೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನಕದಾಸ, ಕುವೆಂಪು, ಶ್ರೀನಿವಾಸ ವೈದ್ಯರ ಕೃತಿಗಳನ್ನು ಕೊಂಕಣಿಗೆ ಅನುವಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.